# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5041/2022 ಫ್ರಾಸಾ-10
ಚಾಸಾ-15

ದಿನಾಂಕಃ 04-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಸುಜಾತಮ್ಮ |
| **ತಂದೆಯ / ಗಂಡನ ಹೆಸರು** | ಅಶ್ವಥಪ್ಪ |
| **ವಯಸ್ಸು** | 32 |
| **ಉದ್ಯೋಗ** | ಗಾರ್ಮೆಂಟ್ಸ್ |
| **ವಾಸಸ್ಥಳ** | ತಿಂಗಳೂರು |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ನಾನು ತಿಂಗಳೂರಿನಿಂದ ಕುಡುಮಲಕುಂಟೆ ಜಾಕಿ ಗಾರ್ಮೆಂಟ್ಸ್ ಪ್ಯಾಕ್ಟರಿಗೆ ಪ್ರತಿ ದಿನ ಬೆಳಿಗ್ಗೆ ಹೋಗಿ ಸಾಯಂಕಾಲ ಮರಳಿ ಬರುತ್ತೇನೆ. 4 ವರ್ಷಗಳ ಹಿಂದೆ ನನ್ನದು ಸೆಕೆಂಡ್ ಶಿಫ್ಟ್ ಇದ್ದು ಸದರಿ ಕೆಲಸದ ಅವಧಿ ಮದ್ಯಾಹ್ನ 2-00 ರಿಂದ ರಾತ್ರಿ 10-00 ಗಂಟೆಯವರೆಗೆ ಇತ್ತು. ನಾನು ಕೆಲಸ ಮುಗಿಸಿಕೊಂಡು ಮರಳಿ ವಾಪಸ್ಸು ಮನೆಗೆ ಬರುತ್ತಿರುವಾಗ ರಾತ್ರಿ 11-00 ಗಂಟೆಗೆ ಸಮಯದಲ್ಲಿ ನಮ್ಮ ಊರಿನ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಸ್ವಲ್ಪ ಮುಂದೆ ಚಂದನದೂರುನಿಂದ ಬರಬೇಕಾದರೆ ರಸ್ತೆ ಎಡ ಭಾಗದಲ್ಲಿ ಒಂದು ಗಾಡಿ ಬಿದ್ದಿತ್ತು ಮತ್ತು ಒಬ್ಬ ಗಂಡಸಿನ ಬಾಡಿ ಬಿದ್ದಿತ್ತು, ತಲೆಯಿಂದ ರಕ್ತ ಬರುತ್ತಿತ್ತು ನಾನು ಬಸ್ಸಿನ ಕಿಟಕಿಯಿಂದ ನೋಡಿರುತ್ತೇನೆ. ನಾನು ಮನೆ ಹತ್ತಿರ ಬಂದು ರಸ್ತೆಯಲ್ಲಿ ಯಾರದೋ ಶವ ಬಿದ್ದಿರುತ್ತದೆ ನಮ್ಮ ಮನೆ ಎದುರುಗಡೆ ಇರುವ ಚಲಪತಿ ಇದ್ದಾರೋ ಇಲ್ಲವೋ ಎಂದು ಕೇಳಿದೆ ಅದಕ್ಕೆ ಎಲ್ಲರೂ ಶವವನ್ನು ನೋಡಲು ಹೋದರು. ಚಲಪತಿ ತಂದೆ ಹೆಸರು ವೆಂಕಟರಮಣಪ್ಪ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುವುದಿಲ್ಲ.

ನಾನು ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿರುವುದಿಲ್ಲ. ಮೃತಪಟ್ಟ ವ್ಯಕ್ತಿ ಹೆಸರು ಮತ್ತು ಆತನ ಸಾವು ಹೇಗೆ ಸಂಭವಿಸಿದೆ , ಆತನ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 20.06.2022 ರಂದು ನಾನು ಪೊಲೀಸರ ಮುಂದೆ ಮೃತಪಟ್ಟ ವ್ಯಕ್ತಿಯ ಹೆಸರು ಸುದೀಪ ಬಿನ್ ಜಯಣ್ಣ , ರಮಾಪುರದವನು , ಶಿವಕುಮಾರ, ನಾಗೇಶ , ಚಲಪತಿ ಮತ್ತು ಸುದೀಪ ನಮ್ಮ ಊರಿಗೆ ಮೊಲ ಬೇಟೆಯಾಡಲು ಬರುತ್ತಿದ್ದರು, ಬೇಟೆಯಾಡಿದ ಮೊಲ ಹಂಚಿಗೆ ವಿಚಾರದಲ್ಲಿ ಸುದೀಶ ಮತ್ತು ಚೇಲಪತಿ ಎಂಬುವವರು ಗಲಾಟೆ ಮಾಡಿಕೊಂಡು ಒಬ್ಬರಿಗೊಬ್ಬರು ಗಲಾಟೆ ಮಾಡಿಕೊಂಡು ಶಿವಕುಮಾರ್ ತಂದಿದ್ದ ನಾಡ ಬಂದೂಕಿನಿಂದ ಚಲಪತಿ ದಿ. 28.05.2022 ರಂದು ರಾತ್ರಿ 9-15 ಗಂಟೆಗೆ ತಲೆಗೆ ಹೊಡೆದು ಸಾಯಿಸಿ ಕೃತ್ಯ ಮರೆ ಮಾಡುವ ಉದ್ದೇಶದಿಂದ ರಸ್ತೆ ಮದ್ಯೆ ಅಪಘಾತದಂತೆ ಬಿಂಬಿಸಿ ರಸ್ತೆ ಮದ್ಯೆ ವಾಹನ ಮತ್ತು ಶವವನ್ನು ತಂದು ಹಾಕಿರುತ್ತಾರೆಂದು ನನಗೆ ಗೊತ್ತಾಯಿತು ಎಂದು ನಾನು ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ನಿಪಿ-20 ಎಂದು ಗುರುತಿಸಲಾಯಿತು. ಸದರಿ ಶವ ಗ್ರೀನರ್ಜಿ ಸೋಲಾರ್ ಪಾರ್ಕ್ ನ ಮುಂಭಾಗದ ರಸ್ತೆಯಲ್ಲಿ ಶವ ಬಿದ್ದಿತ್ತು ಎಂದರೆ ನಿಜ. ನಿಪಿ-5 ಮತ್ತು 6 ಪೊಟೋದಲ್ಲಿರುವ ಶವವನ್ನು ಮತ್ತು ಗಾಡಿಯನ್ನು ನೋಡಿ ಗುರುತಿಸಿರುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದರೂ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ- ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು</u>**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**